ಯೋಜನೆಯನ್ನು ನಿರ್ದಿಷ್ಟ ಅವಧಿಯಲ್ಲಿ ಕೈಗೆತ್ತಿಕೊಂಡು ಮುಗಿಸುವುದಕ್ಕೆ ಸಾಧ್ಯವೇ? ತಿಳಿಸಬೇಕು. ಪತ ನೀರಾವರಿ ಯೋಜನೆ ಮಾಡಬೇಕಾದರೆ ವಿದ್ಯುತ್ ಬೇಕಾಗುತ್ತದೆ. ಇದಕ್ಕೆ ಅತ್ಯಗತ್ಯವಾದ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವೇ? 600-700 ಕೋಟಿ ರೂಪಾಯಿಗಳಾಗುವ ಈ ಯೋಜನೆಗೆ 10-15 ಲಕ್ಷ ರೂಪಾಯಿಗಳಷ್ಟು ಕೆಲಸ ಮಾಡಿದರೆ ಸಾಧ್ಯವಾಗುವುದಿಲ್ಲವಾದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರಿಂದ ನಿರ್ದಿಷ್ಟ ಉತ್ತರಕ್ಕಾಗಿ ನಿರೀಕ್ಷಿಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ಯೋಜನೆಯ ಸರ್ವೆ ಕಾರ್ಯ ಆಗಿದೆ. ಇದರ ಶಂಕುಸ್ಥಾಪನೆ ಮಾಡುವುದಾಗಲಿ ಮತ್ತೊಂದು ಕಾರ್ಯ ಮಾಡುವುದು ಪ್ರಾರಂಭವಾಗಿರುವುದರಿಂದ ಈ ರೀತಿಯಾದ ಚರ್ಚೆಗಳು ನಡೆಯುತ್ತಿವೆ. ಈ ಕುರಿತು ನಾನು ಒಂದೇ ವಿಚಾರವನ್ನು ತಮ್ಮ ಅವಗಾಹನೆಗೆ ತರುವುದೇನೆಂದರೆ, ಮಾರ್ಚಿ ತಿಂಗಳು ಮುಗಿಯುವುದರೊಳಗೆ ನಾವು ಯಾವುದಾದರೊಂದು ಏಜೆನ್ಸಿಯನ್ನು ಫಿಕ್ಸ್ ಮಾಡಿ ಖಾಸಗಿಯವರಿಗೆ ವಹಿಸಿಕೊಡುತ್ತೇವೆ ಅಥವಾ ಸರ್ಕಾರಿ ಅಧಿಕಾರಿಗಳಿಂದ ಮಾಡಿಸುತ್ತೇವೆ. ಇದರ ಒಟ್ಟು ಸರ್ವೆ ಕೆಲಸ ಹಾಗೂ ಡೀಟೈಲ್ ಪ್ರಾಜೆಕ್ಟ್ ರಿಪೋರ್ಟ್ ಅನ್ನು ಮಾಡಿ ಮುಗಿಸುತ್ತೇವೆ. ಇದರ ಒಟ್ಟು ಮೊತ್ತ ಎಷ್ಟಾಗುತ್ತದೆಂಬುದನ್ನು ಗಮನಿಸಿ ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಯಾವ ರೀತಿಯಲ್ಲಿ ಎಷ್ಟು ಹಂತಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಂಡು ಮುಗಿಸ ಬೇಕೆನ್ನುವುದನ್ನು ನಾವು ನಿರ್ಣಯಿಸುತ್ತೇವೆ. ಎರಡನೆಯದಾಗಿ, ತಾವು ಸಂತೇಮಾರಹಳ್ಳಿ ಕ್ಷೇತ್ರದಲ್ಲಿರುವ ಪತ ನೀರಾವರಿ ಯೋಜನೆ ಬಗ್ಗೆ ಏನು ಕೇಳಿದ್ದೀರಿ. ನಾವು ಹತ್ತು ಲಕ್ಷ ರೂಪಾಯಿಗಳನ್ನು ಸರ್ವೆ ಕಾರ್ಯಕ್ಕಾಗಿ ಹಾಗೂ ಇತರೆ ಪ್ರಿಲಿಮಿನರಿ ವರ್ಕ್ಸ್‌ಗಾಗಿ ಇಟ್ಟಿದ್ದೇವೆ. ಈಗಾಗಲೇ ಪ್ರಿ ಕ್ವಾಲಿಫಿಕೇಶನ್ ಟೆಂಡರ್ ಕರೆದಿದ್ದು, ಇದು ಮುಗಿದ ನಂತರ ಕೆಲಸ ಕೈಗೆತ್ತಿಕೊಳ್ಳುತ್ತೇವೆ. ಈ ವರ್ಷದಲ್ಲಿ ದುಡ್ಡು ಬೇಕಾಗುವುದಿಲ್ಲ. ಕೆಲಸ ಪ್ರಾರಂಭಿಸಿದ ನಂತರ ಮುಂದಿನ ಆರ್ಥಿಕ ವರ್ಷದಲ್ಲಿ ಇದಕ್ಕಾಗಿ ಹೆಚ್ಚು ಹಣವನ್ನು ತೆಗೆದಿಡುತ್ತೇವೆ.

ಬೆಂಗಳೂರು ಮಹಾನಗರ ಪಾಲಿಕೆಯ ಬಾಂಡ್ ಹಣಕ್ಕೆ ಕಟ್ಟುತ್ತಿರುವ ಬಡ್ಡಿ

525 - ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಮಹಾನಗರ ಪಾಲಿಕೆಯ ಬಾಂಡ್ ಹಣಕ್ಕೆ ಕಟ್ಟಿರುವ ಬಡ್ಡಿ ಎಷ್ಟು?*

ಆ) *ಈ ಬಾಂಡ್ ಹಣದಲ್ಲಿ ಕ್ರಯ ಆಗಿರತಕ್ಕಂತ 120 ಕೋಟಿ ರೂ. ಹಣದಲ್ಲಿ ಕಳಪೆ ಕಾಮಗಾರಿ ಆಗಿರುವುದರ ಬಗ್ಗೆ ನಾಗರೀಕರಿಂದ ದೂರುಗಳು ಬಂದಿರುವುದು ನಿಜವೇ?*

ಇ) *ಈ ಕಳಪೆ ಕಾಮಗಾರಿಯಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಬಗ್ಗೆ ಕೈಗೊಂಡ ಕಾನೂನು ಕ್ರಮಗಳೇನು?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ರೂ. 42.25 ಕೋಟಿಗಳು.

ಅ) ಬೆಂಗಳೂರು ಮಹಾನಗರ ಪಾಲಿಕೆಯ ಇಂಜಿನಿಯರ್‌ಗಳಿಂದ ಕಾಮಗಾರಿಯ ಕೆಲಸಗಳನ್ನು ವಿಶಿಷ್ಟ ವಿವರಣೆ ಹಾಗೂ ಟೆಂಡರ್ ನಿಬಂಧನೆಗಳನುಸಾರ ನಿರ್ವಹಿಸಲಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಇಂಜಿನಿಯರುಗಳಿಂದ ಕಾಮಗಾರಿಯ ಕೆಲಸಗಳನ್ನು ವಿಶಿಷ್ಟ ವಿವರಣೆ ಹಾಗೂ ಟೆಂಡರ್ ನಿಬಂಧನೆಗಳನುಸಾರ ನಿರ್ವಹಿಸಲಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆಯೆಂದು ತಿಳಿಸಿದ್ದಾರೆ. ಆದರೆ, ಅಟ್ಲಾಂಟ ಮತ್ತು ಪಲ್ಲವಿ ಕನ್‌ಸ್ಟ್ರಕ್ಷನ್‌ನವರು ಕಳಪೆ ಕಾಮಗಾರಿ ಮಾಡಿದ್ದಾರೆಂದು ಮಹಾನಗರಪಾಲಿಕೆಯ ಸರ್ವ ಸದಸ್ಯರ ಸಭೆಯು ತೀರ್ಮಾನಿಸಿದ್ದು, ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಈಗಾಗಲೇ ಚೀಫ್ ಇಂಜಿನಿಯರ್ ಅವರಿಗೆ ಸೂಚಿಸಲಾಗಿದೆ. ಕಳಪೆ ಕಾಮಗಾರಿಯಾಗಿರುವ ಬಗ್ಗೆ ನಾವೊಬ್ಬರೇ ಹೇಳುತ್ತಿಲ್ಲ. ಸಾರ್ವಜನಿಕರಿಂದ ಬಾಂಡ್ ಮೂಲಕ ಇವೊತ್ತು 120 ಕೋಟಿ ರೂಪಾಯಿಗಳ ಹಣ ಏನು ಸಂಗ್ರಹವಾಗಿತ್ತು ಸಕಾಲದಲ್ಲಿ ಕೆಲಸ ಮುಗಿಸದಿರುವುದರಿಂದ ಇದರಲ್ಲಿ ಈಗಾಗಲೇ 42.25 ಕೋಟಿ ರೂಪಾಯಿಗಳಷ್ಟು ಹಣ ಬಡ್ಡಿಗೆ ಹೊರಟುಹೋಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕಳೆದ ಅಧಿವೇಶನದ ಸಂದರ್ಭದಲ್ಲಿ ಒಂದು ಹೇಳಿಕೆ ಕೊಟ್ಟಿದ್ದರು. ಏನೆಂದರೆ, ಜೂನ್ ತಿಂಗಳೊಳಗೆ ಈ ಕಾಮಗಾರಿ ಮುಗಿಯುತ್ತದೆ ಎಂದಿದ್ದರು. ಜೂನ್ ತಿಂಗಳ ಗಡುವು ಮುಗಿದು ಈಗ ನವೆಂಬರ್ ತಿಂಗಳು ಬಂದಿದೆ. ಅಲ್ಲದೆ, ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಕಳಪೆ ಕೆಲಸವಾಗಿದ್ದರೆ ಅದರ ಬಗ್ಗೆ ತಿಳಿಸಲು ರಸ್ತೆ ತಜ್ಞರಾದ ಪ್ರೊಫೆಸರ್ ಜೆಸ್ಸೊ ಅವರನ್ನು ಈ ಕುರಿತು ರಚಿಸಲಾಗಿದ್ದ ಸಮಿತಿಗೆ ಸಲಹೆಗಾರರನ್ನಾಗಿ ಮಹಾನಗರಪಾಲಿಕೆಯು ನೇಮಿಸಿತ್ತು. ಅವರು ಸಲ್ಲಿಸಿರುವ ವರದಿಯಲ್ಲಿ ರಸ್ತೆ ಕಾಮಗಾರಿಯಲ್ಲಿ ಅವ್ಯವಹಾರವಾಗಿದೆಯೆಂದೂ, ಶೇಕಡ 10ರಷ್ಟು ನಿಬಂಧನೆಯನ್ನು ಪಾಲಿಸಿಲ್ಲವೆಂದೂ, ನಿಬಂಧನೆಗಳನ್ನು ಉಲ್ಲಂಘಿಸಿದ್ದಾರೆಂದು ಹೇಳಿದ್ದಾರೆ.

12.00 ಪಿಎಂ

ಅದೇ ರೀತಿ ಈ ಕಾಮಗಾರಿಯಲ್ಲಿ ಸಾಕಷ್ಟು ಕಳಪೆಯಾಗಿದೆ ಎಂಬ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ಆದರೆ ಉತ್ತರದಲ್ಲಿ ಕಳಪೆಯಾಗಿಲ್ಲವೆಂದು ತಿಳಿಸಿದ್ದಾರೆ. ಆದರೆ ನನಗೆ ಬಂದಿರುವ ಮಾಹಿತಿಯ ಪ್ರಕಾರ ಕಾಮಗಾರಿಯಲ್ಲಿ ಕಳಪೆಯಾಗಿದೆ. ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಗುಣಮಟ್ಟ ನಿಯಂತ್ರಣದ ಮುಖ್ಯಸ್ಥರಾದ ಪ್ರೊ. ಎನ್.ಜಿ. ತಾವರೆಯವರು ಸಹ ಕಾಮಗಾರಿಯಲ್ಲಿ ಕಳಪೆಯಾಗಿದೆಯೆಂದು ವರದಿಯನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಯವರು ಕೊಟ್ಟಿರುವ ಉತ್ತರದಲ್ಲಿ ಕಳಪೆಯಾಗಿಲ್ಲವೆಂದು ಇದೆ. ಕೋಟ್ಯಾಂತರ ರೂಪಾಯಿಗಳ ಖರ್ಚು, ಆದರೆ ರಸ್ತೆಯ ತುಂಬಾ ಗುಂಡಿಗಳು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಸಂಪಾದಕೀಯದಲ್ಲಿ ಎಲ್ಲಾ ರೀತಿಯಾದ ಅವ್ಯವಹಾರವಾಗಿದೆಯೆಂದು ಬಂದಿದೆ. ಪಲ್ಲವಿ ಮತ್ತು ಅಟ್ಲಾಂಟ ಗುತ್ತಿಗೆದಾರರನ್ನು ವಜಾ ಮಾಡಬೇಕೆಂದು ವರದಿ ಕೊಟ್ಟಿದೆ. ಇಲ್ಲಿ ಅವ್ಯವಹಾರ ಆಗಿಲ್ಲ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣವನ್ನು ನೀಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, 1998ನೇ ಇಸವಿಯಲ್ಲಿ ಬಾಂಡ್ ರೋಡ್ ಸ್ಕೀಮ್ ಕಾನ್ಸೆಪ್ಟ್ ಅನ್ವಯಕ್ಕೆ ಬಂತು. ಈ ಸ್ಕೀಮ್‌ನಲ್ಲಿ ಸುಮಾರು 263 ಕಿ.ಮೀ. ರಸ್ತೆಯನ್ನು ಒರಿಜಿನಲ್ ಎಸ್ಟಿಮೇಟ್ ಪ್ರಕಾರ 114ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಾಡಬೇಕಾಗಿತ್ತು. ಇದರಲ್ಲಿ 119 ರಸ್ತೆಗಳು ಒಳಪಟ್ಟಿದ್ದವು. ಆದರೆ ಅಂತಿಮವಾಗಿ ಗುತ್ತಿಗೆ ಕೊಟ್ಟಿದ್ದು 147ಕೋಟಿ ರೂಪಾಯಿಗಳಿಗೆ, ಈಗ ರಿವೈಸ್ಡ್ ಕಾಸ್ಟ್ ಪ್ರಕಾರ 205 ಕೋಟಿ ರೂಪಾಯಿಗಳಾಗಿದೆ. Accepted standardsಗೆ ಈ ರಸ್ತೆಗಳ ಗುಣಮಟ್ಟವನ್ನು ಕಾಪಾಡಬೇಕು ಎಂಬುದು ಇದರ ಮೂಲ ಉದ್ದೇಶವಾಗಿತ್ತು. ನಾವು ಹಲವಾರು ಏಜನ್ಸಿಗಳಿಗೆ ಈ ಕಾಮಗಾರಿಯನ್ನು ಹಂಚಿದ್ದೇವೆ. 119 ರಸ್ತೆಗಳಲ್ಲಿ 70 ರಸ್ತೆಗಳ ಕೆಲಸ ಪೂರ್ಣವಾಗಿದೆ. ಉಳಿದ ರಸ್ತೆಗಳ ಕೆಲಸ ಡಿಸೆಂಬರ್, ಜನವರಿ, ಫೆಬ್ರವರಿ ತಿಂಗಳಿನಲ್ಲಿ ಮುಕ್ತಾಯವಾಗುತ್ತದೆ. ಈ ಕಾಮಗಾರಿಯ ಗುತ್ತಿಗೆಯನ್ನು ಕೊಡುವಾಗ ನಗರಪಾಲಿಕೆಗೂ ಗುತ್ತಿಗೆದಾರರ ನಡುವೆ ಒಂದು ಒಪ್ಪಂದವಾಗಿದೆ. ಯಾವ ರಸ್ತೆಗಳನ್ನು ಈ ಏಜನ್ಸಿಯವರು ಉತ್ತಮಪಡಿಸಿದ್ದಾರೆ ಅದನ್ನು ಮಹಾನಗರಪಾಲಿಕೆಗೆ ಹಸ್ತಾಂತರವಾದ ಮೇಲೆ ಎರಡು ವರ್ಷಗಳ ಕಾಲ ಆ ರಸ್ತೆಗಳಲ್ಲಿ ಯಾವುದೇ ತೊಂದರೆ, ಕೊರತೆಗಳು ಬಂದರೂ ಅದನ್ನು ತಮ್ಮ ಖರ್ಚಿನಲ್ಲಿ ರಿಪೇರಿ ಮಾಡಬೇಕು ಎಂಬುದಾಗಿ ಆ ಏಜೆನ್ಸಿಯವರೊಂದಿಗೆ ಗುತ್ತಿಗೆ ಕೊಡುವಾಗ ಒಪ್ಪಂದವಾಗಿದೆ. ಅವರುಗಳೇನು 70 ರಸ್ತೆಗಳನ್ನು ಮುಗಿಸಿದ್ದಾರೆ ಅವುಗಳನ್ಯಾವುದನ್ನು ಮಹಾನಗರ ಪಾಲಿಕೆಯವರು ತೆಗೆದುಕೊಂಡಿಲ್ಲ. ಇನ್ನೂ ಆ ಏಜನ್ಸಿಯವರ ಹತ್ತಿರವೇ ಇದೆ. ಈ 119ರಸ್ತೆಗಳನ್ನು ಮಹಾನಗರಪಾಲಿಕೆಯು ತೆಗೆದುಕೊಂಡಮೇಲೆ ಎರಡು ವರ್ಷಗಳವರೆಗೆ ಆ ರಸ್ತೆಗಳಲ್ಲಿ ಏನೇ ತೊಂದರೆ, ಕೊರತೆಯಾದರೆ ಅದನ್ನು ರಿಪೇರಿ ಮಾಡಿಸುವ ಜವಾಬ್ದಾರಿ ಆ ಗುತ್ತಿಗೆದಾರರ ಮೇಲೆ ಬೈಂಡಿಂಗ್ ಆಗಿರುತ್ತದೆ ಎಂಬ ವಿಚಾರವನ್ನು ಮಾನ್ಯ ಸದಸ್ಯರು ಮತ್ತು ಸದನವು ಗಮನದಲ್ಲಿಟುಕೊಳ್ಳಬೇಕು. ಈ ರಸ್ತೆಗಳಲ್ಲಿ ಕೊರತೆ ಕಂಡುಬಂದರೆ ಅದನ್ನು ರೆಕ್ಟಿಫೈ ಮಾಡಬೇಕು ಎನ್ನತಕ್ಕ ಇನ್‌ಕ್ಲಿಲೇಷನ್ ಇದೆ. ಮಾನ್ಯ ಸದಸ್ಯರು ಯಾರದೋ ಹೆಸರನ್ನು ಹೇಳಿ ಅವರು ಬಂದಿದ್ದರು ನೋಡಿ ಕಳಪೆ ಕೆಲಸವಾಗಿದೆಯೆಂದು ಹೇಳಿದ್ದಾರೆಂದರು. ಕ್ರಂಬಿಗಲ್ ರಸ್ತೆ, ಗಂಗಗೊಂಡನಹಳ್ಳಿ ರಸ್ತೆಗಳನ್ನೇನು ಅಟ್ಲಾಂಟದವರು ಮಾಡಿದ್ದಾರೆ ಅಲ್ಲಿ ಸರಿಯಿಲ್ಲವೆಂದು ನನಗೆ ಬಂದಿರುವ ಮಾಹಿತಿ ಪ್ರಕಾರ ತಿಳಿದುಬಂದಿದೆ. ಹಾಗೆಯೇ ಜಯರಾಮರೆಡ್ಡಿಯವರು ಮಾಡಿರುವ ಒಂದು ರಸ್ತೆ, ಮುನಿಷತ್ತಪ್ಪ ಮಾಡಿರುವ ಒಂದು ರಸ್ತೆ, ಮಧು ಕನ್‌ಸ್ಟ್ರಕ್ಷನ್ ಕೆ.ಎ. ವೆಂಕಟೇಶ್‌ರವರು ಮಾಡಿರುವ ಒಂದು ರಸ್ತೆ, ನಾರಾಯಣ ರೆಡ್ಡಿಯವರು ಮಾಡಿರುವ ಒಂದು ರಸ್ತೆ ಸರಿಯಾಗಿಲ್ಲವೆಂದು ತಿಳಿದು ಬಂದಿರುತ್ತದೆ. ಈ ರಸ್ತೆಗಳ ಬಗ್ಗೆ ಆಯಾಯಾ ಗುತ್ತಿಗೆದಾರರ ಗಮನಕ್ಕೆ ಅವರು ತಂದಿದ್ದಾರೆ. ಆದರೆ ಸರ್ಕಾರದ, ಮಹಾನಗರಪಾಲಿಕೆಯು ಯಾವುದೇ ರಸ್ತೆಯನ್ನು ತೆಗೆದುಕೊಂಡಿಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ರಸ್ತೆಗಳ ಬಗ್ಗೆ ಹೈಕೋರ್ಟಿನ ಒಂದು ರಿಟ್ ಪಿಟೀಷನ್‌ನಲ್ಲಿ ನಿರ್ದೇಶನವನ್ನು ಕೊಟ್ಟಿದೆ. ಆ ಸ್ಥಳದಲ್ಲಿ ಯಾರು ಗುತ್ತಿಗೆ ಕೆಲಸ ಮಾಡುತ್ತಾರೆ ಅವರ ಹೆಸರನ್ನು ಮತ್ತು ಇಂಜಿನಿಯರ್ ಯಾರು ಇರುತ್ತಾರೆ ಅವರ ಹೆಸರನ್ನು ನಮೂದಿಸಬೇಕೆಂದು ನಿರ್ದೇಶನವನ್ನು ಹೈಕೋರ್ಟ್ ನೀಡಿದೆ. ಈ ರಸ್ತೆಗಳ ಮೈನ್‌ಟೈನ್ ಮಾಡಬೇಕಾದರೆ ಅವರುಗಳ ಹೆಸರನ್ನು ಜನರಿಗೆ ತಿಳಿಸಿಕೊಡಬೇಕು. ಏಕೆಂದರೆ ಅನೇಕ ರಸ್ತೆಗಳು ಹದಗೆಟ್ಟಿವೆ. ಈ ರಸ್ತೆಗಳನ್ನು ಬಂದು ನೋಡಿ ಎಂದು

ನಾವು ಅನೇಕ ಸಲ ಮುಖ್ಯ ಮಂತ್ರಿಗಳನ್ನು ಕೇಳಿಕೊಂಡಿದ್ದೇವೆ. ಬೆಂಗಳೂರನ್ನು ಸಿಂಗಪುರವನ್ನಾಗಿ ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದು ಬಹಳ ಸಂತೋಷ. ಆದರೆ ಇಲ್ಲಿಯ ರಸ್ತೆಗಳ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಈ ಗುತ್ತಿಗೆದಾರರ ಹೆಸರನ್ನು ಬ್ಲಾಕ್‌ಲಿಸ್ಟ್‌ನಲ್ಲಿಡಬೇಕು. ಆ ರೀತಿ ಮಾಡಬೇಕೆಂದು ಹಿಂದಿನ ಆಯುಕ್ತರಾಗಿದ್ದ ಜಯರಾಜ್‌ರವರು ಹೊರಟರು. ಆದರೆ ಅವರನ್ನು ಬದಲಾವಣೆ ಮಾಡಿದರು.

ಅಧ್ಯಕ್ಷರು : ತಮ್ಮ ಪ್ರಶ್ನೆಗೂ ತಾವು ಕೇಳುತ್ತಿರುವುದಕ್ಕೂ ಸಂಬಂಧವಿಲ್ಲ. ತಾವು ಜಯರಾಜ್ ಬಗ್ಗೆ ಏಕೆ ಮಾತನಾಡುತ್ತೀರಿ? ತಾವು ಪ್ರಶ್ನೆಗೆ ಸಂಬಂಧಪಟ್ಟಂತೆ ಮಾತ್ರ ಸಪ್ಲಿಮೆಂಟರಿ ಕೇಳಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಯಾವ್ಯಾವ ರಸ್ತೆಗಳನ್ನು ತಾವು ನೋಡಿದ್ದೀರಿ? ಕಳಪೆ ಕಾಮಗಾರಿ ರಸ್ತೆಗಳನ್ನು ಮಾಡುವಾಗ ಆಗಿರುವುದನ್ನು ತಾವು ನೋಡಿದ್ದೀರಾ, ಎಷ್ಟು ರಸ್ತೆಗಳು ಬಾಂಡ್ ಸ್ಕೀಮ್‌ನಲ್ಲಿ ಈ ರೀತಿ ಕಳಪೆಯಾಗಿವೆ?

ಅಧ್ಯಕ್ಷರು : ತಾವು ಐಷ್ಟೊಂದು ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳುವಂತಿಲ್ಲ. ಮೂಲಭೂತವಾಗಿ ಯಾರು ಪ್ರಶ್ನೆಯನ್ನು ಕೇಳಿರುತ್ತಾರೋ ಅವರು ಮಾತ್ರ ಮೂರು ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳಬಹುದು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ನಾನು ಬಾಂಡ್ ಸ್ಕೀಮ್‌ನಲ್ಲಿಯೇ ಕೇಳುತ್ತಿದ್ದೇನೆ. ಈ ಸ್ಕೀಮ್‌ನಲ್ಲಿ ಮಾಡಿರುವ ರಸ್ತೆಗಳನ್ನು ತಾವು ನೋಡಿದ್ದೀರಾ? ಎಷ್ಟು ರಸ್ತೆಗಳನ್ನು ನೋಡಿದ್ದೀರಿ? ಮಹಾನಗರ ಪಾಲಿಕೆಯಲ್ಲಿ ಹೈಕೋರ್ಟಿನ ಆದೇಶ ಇದೆಯೆ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಬಾಂಡ್‌ನ ಯೋಜನೆ ಏನಿದೆ ಅದು ಬೆಂಗಳೂರು ಮಹಾ ನಗರಪಾಲಿಕೆಗೆ ಹೆಮ್ಮೆಯ ಯೋಜನೆಯಾಗಬೇಕಾಗಿತ್ತು. ಅದೇ ಕಲ್ಪನೆಯಿಂದ ಬಾಂಡ್‌ನ ಮೂಲಕ ಹಣವನ್ನು ಸಂಗ್ರಹಿಸಿ ಈ ಯೋಜನೆಯನ್ನು ಮಾಡಲಾಗಿದೆ. ತಾವು ಎರಡು ವರ್ಷಗಳವರೆಗೆ ಗುತ್ತಿಗೆದಾರರು ರಸ್ತೆಗಳನ್ನು ಮೈನ್‌ಟೈನ್ ಮಾಡುತ್ತಾರೆಂದು ಹೇಳಿದ್ದೀರಿ. ಆದರೆ ಬಾಂಡ್ ಯೋಜನೆಯ ರಸ್ತೆಯ ಕಾಮಗಾರಿಗಳು ನಗರಪಾಲಿಕೆಯ ಇತರೆ ರಸ್ತೆಗಳ ಕಾಮಗಾರಿಯಂತೆ ಆಗಿಬಿಟ್ಟಿದೆ. ಹಿಂದಿನ ಆಯುಕ್ತರು ಬಾಂಡ್ ಯೋಜನೆಯ ರಸ್ತಗಳು ಕಳಪೆ ಕಾಮಗಾರಿಯಿಂದ ಆಗಿದೆಯೆಂದು ನಗರಪಾಲಿಕೆಯ ಸಭೆಯಲ್ಲಿ ಹೇಳಿಬಿಟ್ಟಿದ್ದಾರೆ. ತಾವು ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿ ರಸ್ತೆಗಳೆಲ್ಲ ಚೆನ್ನಾಗಿ ಆಗುತ್ತದೆ ಎಂಬ ವಿಶ್ವಾಸ ಜನರಿಗೆ ಬಂದಿತ್ತು. ತಾವು 170 ಕಿ.ಮೀ. ರಸ್ತೆ ಮಾಡುವ ಬಗ್ಗೆ ಹೇಳಿದ್ದೀರಿ. ಆದರೆ 26.282 ಹೊಂಡಗಳು ರಸ್ತೆಯಲ್ಲಿವೆ ಎಂದು ಮಹಾನಗರ ಪಾಲಿಕೆಯವರೇ ಹೇಳುತ್ತಿದ್ದಾರೆ. ರೋಡಿನಲ್ಲಿ ಬಾಂಡ್ ಇರುವುದಕ್ಕಿಂತ 'ಪಾಂಡ್' ಇದೆ. ಈ 'ಪಾಂಡ್' ಯೋಜನೆ ಯಾವಾಗ ಮುಗಿಯಬೇಕಾಗಿತ್ತು. ತಾವು ಜನವರಿ, ಫೆಬ್ರವರಿಯಲ್ಲಿ ಮುಗಿಸುವುದಾಗಿ ಹೇಳಿದ್ದೀರಿ. ಆದರೆ ನಿಜವಾಗಿಯೂ ಯಾವಾಗ ಒಪ್ಪಂದದ ಅವ್ಧಿಯ ಮುಗಿಯಬೇಕಾಗಿತ್ತು. ತಡವಾಗಲು ಮುಖ್ಯವಾದ ಕಾರಣವೇನು? ತಡವಾಗಲು ಕಾರಣಕರ್ತರಾಗಿರುವವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಸ್.ಎಂ. ಕೃಷ್ಣ : ನಗರದಲ್ಲಿ ಬಂದಂಥ ಧಾರಾಕಾರವಾದ ಮಳೆಯನ್ನು ಗಮನದಲ್ಲಿ ಇಟ್ಟುಕೊಂಡರೆ ಆ ಮಳೆಗೆ ಜರ್ಝರಿತವಾಗದೇ ಇರುವ ರಸ್ತೆಗಳು ಬಹಳ ಕಡಿಮೆ. ಅದು ಬಾಂಡ್

ರಸ್ತೆಗಳಾಗಿರಬಹುದು, ನಗರಪಾಲಿಕೆಯ ರಸ್ತೆಗಳು ಆಗಿರಬಹುದು. ಆದರೆ ಗುಣಮಟ್ಟದ ಬಗ್ಗೆ ಯಾವುದೇ ರೀತಿಯ ಕಾಂಪ್ರಮೈಸ್ ಮಾಡಿಕೊಳ್ಳಲು ನಾವು ನಗರ ಪಾಲಿಕೆಯವರಿಗೆ ಅವಕಾಶವನ್ನು ಕೊಡುವುದಿಲ್ಲ. ಯಾರು ಈ ಬಾಂಡ್ ರೋಡ್‌ನ ಶಿಸ್ತಿಗೆ ಬರುವುದಿಲ್ಲ ಅವರನ್ನೆಲ್ಲ ಯಾವುದೇ ದಾಕ್ಷಣ್ಯವಿಲ್ಲದೆ ಕಿತ್ತು ಹಾಕುತ್ತೇವೆ. ಇದರ ಬಗ್ಗೆ ಮಾನ್ಯ ಸುರೇಶ್‌ಕುಮಾರ್‌ರವರಿಗೆ ವಿಶ್ವಾಸವಿರಲಿ. ಹಿಂದಿನ ಆಯುಕ್ತರು ರಸ್ತೆಗಳ ಕೆಲಸ ಕಳಪೆಯಾಗಿದೆ ಎಂದು ಹೇಳಿದ್ದಾರೆಂದು ತಾವು ಹೇಳಿದ್ದೀರಿ. ಈಗ ಹೊಸ ಆಯುಕ್ತರು ಬರುತ್ತಾರೆ, ರಸ್ತೆಗಳನ್ನು ನೋಡುತ್ತಾರೆ, ಕಳಪೆಯಾಗಿದ್ದರೆ ಅದಕ್ಕೆ ಯಾರು ಕಾರಣಕರ್ತರು ಎಂಬುದನ್ನು ಗುರುತಿಸಿ ಅವರ ಮೇಲೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈ ರೀತಿಯ ಧಾರಾಕಾರದ ಮಳೆಗೂ ನಮ್ಮ ಬೆಂಗಳೂರಿನ ರಸ್ತೆಗಳು ನಿಂತಿದೆ ಎಂದು ನಾವು ಹೆಮ್ಮೆಪಡುತ್ತೇವೆ. 29 ಸಾವಿರ ಹೊಂಡಗಳು ಇದೆಯೆಂದು ಹೇಳಿದ್ದಾರೆ. ಅದನ್ನು ಲೆಕ್ಕ ಮಾಡಿದವರು ಯಾರು ಎಂಬುದು ಗೊತ್ತಾಗಲಿಲ್ಲ. ಅದರ ಬಗ್ಗೆ ನಾನೂ ಕೂಡ ಪೇಪರ್‌ನಲ್ಲಿ ಓದಿದ್ದೇನೆ. ಕೆಲವರು 31 ಸಾವಿರ ಗುಂಡಿಗಳು ಇವೆ ಎಂದು ಹೇಳುತ್ತಾರೆ. ಆದರೆ ಕರಾರುವಕ್ಕಾಗಿ ಎಷ್ಟು ಗುಂಡಿಗಳಿವೆ ಎಂದು ಯಾರೂ ಕೂಡ ಪೇಳಿಲಿಕ್ಕೆ ಬರುವುದಿಲ್ಲ. ಆದರೆ ಈ ಮಳೆಗೆ ಗುಂಡಿಗಳು ಬೀಳದೆ ಹೋದರೆ ಅದು ಮಳೆಯೇ ಎನಿಸಿಕೊಳ್ಳುವುದಿಲ್ಲ. ಈ ಎಲ್ಲಾ ಗುಂಡಿಗಳನ್ನು ಡಿಸೆಂಬರ್ 15ರೊಳಗಾಗಿ ಮುಚ್ಚಲಿಕ್ಕೆ ನಾವು ತತ್‌ಕ್ಷಣ ಸೂಚನೆಗಳನ್ನು ಕೊಟ್ಟಿದ್ದೇವೆ. ಸಮರೋಪಾದಿಯಲ್ಲಿ ಈ ಗುಂಡಿಗಳನ್ನು ಮುಚ್ಚತಕ್ಕಂಥ ಕೆಲಸವನ್ನು ಮಾಡುವುದರ ಮೂಲಕ ಮಾನ್ಯ ಸುಬ್ಬಾರೆಡ್ಡಿಯವರಿಗೆ ಸಂತೋಷವನ್ನು ತಂದು ಕೊಡಲಿಕ್ಕೆ ನಾವು ಪ್ರಯತ್ನ ಪಡುತ್ತಿದ್ದೇವೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಮುಖ್ಯಮಂತ್ರಿಗಳು ನಗರದ ಬಗ್ಗೆ ವಿಶೇಷವಾಗಿ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡುತ್ತಿದ್ದಾರೆ ಎಂದು ಜನತೆಗೆಲ್ಲಾ ಅನಿಸಿದೆ. ಅಂತಹ ಮುಖ್ಯಮಂತ್ರಿಗಳೂ ಕೂಡ ಮಳೆಯ ಕಾರಣಕ್ಕಾಗಿ ಶರಣು ಹೋಗುವುದನ್ನು ಯಾರು ಕೂಡ ಇಷ್ಟಪಡುವುದಿಲ್ಲ. ಹಾಗಾದರೆ ಜಮ್ಮು ಮತ್ತು ಕಾಶ್ಮೀರ, ಅಸ್ಸಾಂ ಇತರ ರಾಜ್ಯಗಳಲ್ಲಿ ಮಳೆಯೇ ಆಗುವುದಿಲ್ಲವೇ? ಅಲ್ಲಿ ರಸ್ತೆಗಳೇ ಇಲ್ಲವೇ? ಇಲ್ಲಿ ಸರ್ಕಾರ ಏಕೆ ಡ್ರೈನ್ ವರ್ಕ್ ಅನ್ನು ಸರಿಯಾಗಿ ಮಾಡಿಸಲಿಲ್ಲ? ಬಾಂಡ್ ಹಣದಲ್ಲಿ ಕೈಗೊಂಡ ಕಾಮಗಾರಿಗಳಲ್ಲಿ ರಸ್ತೆಗಿಂತ ಡ್ರೈನ್ ಮುಖ್ಯವಾದುದಾಗಿತ್ತು. ಆ ಡ್ರೈನ್ ವರ್ಕ್ ಅನ್ನು ನೀವು ಸರಿಯಾಗಿ ಮಾಡಿಸಿಲ್ಲ. ನಾವು ಸಾಮಾನ್ಯವಾಗಿ ರಸ್ತೆ ಕಾಮಗಾರಿಗಳಲ್ಲಿ ಇಷ್ಟು ಲಾಭ ಹೊಡೆಯುತ್ತಿದ್ದೆವು, ಈ ಬಾಂಡ್ ರೋಡ್ ಕಾಮಗಾರಿಗಳಲ್ಲಿ ಇನ್ನಷ್ಟು ಲಾಭ ಹೊಡೆಯೋಣ ಎಂಬ ಮನೋಭಾವನೆಯಿಂದ ಆ ಲಾಭದಲ್ಲಿ ಹೆಚ್ಚಳವಾಯಿತೇ ವಿನಃ ಕ್ವಾಲಿಟಿ ಮೈಂಟೈನ್ ಆಗಲಿಲ್ಲ. ಯಾರು ಸಮಯಕ್ಕೆ ಸರಿಯಾಗಿ ಕಾಮಗಾರಿಗಳನ್ನು ಮುಗಿಸದೇ ಕಾಲವನ್ನು ಮುಂದೂಡುತ್ತಾ ಹೋಗುತ್ತಿದ್ದಾರೋ ಆ ಸಂಬಂಧಪಟ್ಟ ಗುತ್ತಿಗೆದಾರರು ಮತ್ತು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ಮಾನ್ಯ ಮುಖ್ಯಮಂತ್ರಿಗಳು ಮಳೆಯ ಒಂದು ಕಾರಣವೊಡ್ಡಿ ಕಾರ್ಪೊರೇಷನ್‌ಗೆ ಸರ್ಟಿಫಿಕೇಟ್ ಕೊಡುವುದು ಬೆಂಗಳೂರು ನಾಗರೀಕರ ದೃಷ್ಟಿಯಿಂದ ಅಷ್ಟು ಸರಿಯಾಗುವುದಿಲ್ಲ ಎಂದು ನಾನು ವಿನಮ್ರನಾಗಿ ಹೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಬೆಂಗಳೂರು ನಾಗರೀಕರ ವಿಚಾರದ ಬಗ್ಗೆ ಮಾನ್ಯ ಸುರೇಶ್.... ಕುಮಾರ್‌ರವರಿಗೆ ನನಗಿಂತ ಜಾಸ್ತಿ ಮಾಹಿತಿ ಇರಬಹುದು. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಂತಹ

ಸಲಹೆಗಳನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇವೆ. ಹಿಂದಿನ ಆಯುಕ್ತರವರು ಎಂದೂ ಕೂಡ ಬಾಂಡ್ ಸ್ಕೀಮ್ ಫೇಲ್ಯೂರ್ ಆಗಿದೆ ಎಂದು ರೆಕಾರ್ಡ್‌ನಲ್ಲಿ ಹೇಳಿಲ್ಲ. ಅದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಕ್ವಾಲಿಟಿ ವಿಚಾರದಲ್ಲಿ ನಾವು ಯಾವುದೇ ಕಾಂಪ್ರಮೈಸ್ ಅನ್ನು ಮಾಡಿಕೊಳ್ಳುವುದಿಲ್ಲ. ಇನ್ನು ಮಾನ್ಯ ಸದಸ್ಯರು ಪ್ರಾಫಿಟ್ ವಿಚಾರ ಹೇಳಿದ್ದಾರೆ. ಯಾವ ಸರ್ಕಾರದಲ್ಲಿ ಯಾವ ಕಾಂಟ್ರಾಕ್ಟರ್ ಪ್ರಾಫಿಟ್ ಇಲ್ಲದೇ ಕೆಲಸ ಮಾಡುವುದಕ್ಕೆ ಬರುತ್ತಾನೆ ಹೇಳಿ? .....

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಒಟ್ಟಾರೆ ಯೋಜನೆ ಬಗ್ಗೆ ಆ ಮಾತು ಹೇಳಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ : ಈಗ ಅಹ್ಮದಾಬಾದ್ ಕಾರ್ಪೊರೇಷನ್ ಬಗ್ಗೆಯೇ ಮಾತನಾಡೋಣ. ಅಲ್ಲಿ ಕಾಂಟ್ರಾಕ್ಟರ್ ಇಲ್ಲವೇ? ಅವನು ಅಲ್ಲಿ ಲಾಭಕ್ಕೆ ಕೆಲಸ ಮಾಡುತ್ತಿದ್ದಾನೋ ಅಥವಾ ಚಾರಿಟಿ ಕೆಲಸ ಎಂದು ಮಾಡುತ್ತಿದ್ದಾನೋ? ಮಾನ್ಯ ಸುರೇಶ್ ಕುಮಾರ್‌ರವರು ಬೆಂಗಳೂರಿನ ಬಗ್ಗೆ ಅಗಾಧವಾದಂತಹ ಕಾಳಜಿಯನ್ನು ಇಟ್ಟುಕೊಂಡಿದ್ದಾರೆ. ಮಾನ್ಯ ಸದಸ್ಯರು ಕಾರ್ಪೊರೇಷನ್ ಜೊತೆಯಲ್ಲಿ ಸಹಕರಿಸಿ ಎಲ್ಲೆಲ್ಲಿ ತಪ್ಪಾಗಿದೆಯೋ ಅದನ್ನು ದಯವಿಟ್ಟು ನಮ್ಮ ಗಮನಕ್ಕೆ ತರಲಿ. ಅದನ್ನು ತಿದ್ದಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಅದನ್ನು ನಾವು ತಿದ್ದಲಿಕ್ಕೆ ಆಗದಿದ್ದರೆ ಮುಂದೆ ಈ ದಿಸೆಯಲ್ಲಿ ಏನು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂಬುದನ್ನು ನಿಮ್ಮ ಜೊತೆಯಲ್ಲೇ ಚರ್ಚಿಸಿ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಎಸ್.ಎಂ. ಕೃಷ್ಣ : ಎಲ್ಲಿ ತಪ್ಪಾಗಿದೆಯೋ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಾವು ಮುಕ್ತರಾಗಿದ್ದೇವೆ. ನಿಮ್ಮ ಗಮನಕ್ಕೆ ಎಲ್ಲಿ ಈ ಕಾಮಗಾರಿಗಳು ಸರಿಯಾಗಿ ನಡೆದಿಲ್ಲ ಎಂದು ಕಂಡು ಬಂದಿದೆಯೋ ಅದರ ಬಗ್ಗೆ ಸರ್ಕಾರಕ್ಕೆ ಬರೆದು ಕಳುಹಿಸಿದರೆ ನಾನು ಆ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇನೆ. ಅದರ ನಂತರ ಏನು ಆಗಬೇಕು ಎಂಬುದನ್ನು ನಾನು ತಿಳಿಸುತ್ತೇನೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ನಿಗದಿತ ಅವಧಿಯೊಳಗಾಗಿ ಕೆಲಸ ಪೂರೈಸದಿದ್ದವರಿಗೆ 18 ಕೋಟಿ ರೂಪಾಯಿಗಳನ್ನು ದಂಡವಾಗಿ ವಿಧಿಸಬೇಕೆಂದು ಕಾರ್ಪೊರೇಷನ್‌ನಲ್ಲಿ ನಿಗದಿ ಮಾಡಿದ್ದಾರೆ. ಪಾಲಿಕೆ ಅಧಿಕಾರಿಗಳು ಪಾಕೆಟ್ ಮನಿ ಎಂದು 2.5 ಕೋಟಿ ರೂಪಾಯಿಗಳ ದುರುಪಯೋಗ ಮಾಡಿಕೊಂಡಿದ್ದಾರೆ. ಯಾರಿಗೆ ಟೆಂಡರ್ ಕೊಡಬೇಕೆಂಬ ಬಗ್ಗೆ ಕನ್ಸಲ್‌ಟೆನ್ಸಿಗೆ 95 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇಲ್ಲಿ ಕಳಪೆ ಕಾಮಗಾರಿಯಾಗಿದೆ, ಇಲ್ಲಿ ಶೇಕಡ 10ರಷ್ಟನ್ನೂ ಕೂಡ ಮಾರ್ಗಸೂಚಿಗಳನ್ನು ಅನುಸರಿಸಿಲ್ಲ, ಶೇಕಡ 60ರಷ್ಟನ್ನು ಜನ ಅನುಭವವಿಲ್ಲದೇ ಇರತಕ್ಕ ಕಾಂಟ್ರಾಕ್ಟರ್‌ಗಳಿಗೇ ಇಲ್ಲಿ ಕೆಲಸ ವಹಿಸಿ ಕೊಡಲಾಗಿದೆ ಎಂದು ತಜ್ಞರು ಹೇಳಿದ್ದಾರೆ. ಈ ಮುನಿಸಿಪಲ್ ಬಾಂಡ್ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ಮುಂಗಡವಾಗಿ ಹಣವನ್ನು ನೀಡಲಾಗಿದೆ ಎಂದು ಹಿಂದಿನ ಆಯುಕ್ತರು ಹೇಳಿದ್ದಾರೆ. ಇಲ್ಲಿ ಟೆಂಡರ್ ಅನ್ನು ಕರೆದಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದನ್ನು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಲೆಗೆಸಿಯನ್ನು ನಾವು ಇನ್‌ಹೆರಿಟ್ ಮಾಡಿಕೊಂಡಿದ್ದೇವೆ. ಕಾರ್ಪೊರೇಷನ್‌ನ ಬಾಂಡ್ ಸ್ಕೀಮ್ ನಮ್ಮ ಪರಿಕಲ್ಪನೆಯಲ್ಲ. ಇದು 1998ನೇ ಇಸವಿಯಲ್ಲಿ ಪ್ಲಾನ್ ಮಾಡಿರುವಂಥಾದ್ದು ಆಗಿದೆ. 1998ರಲ್ಲೇ ಏಜೆನ್ಸಿಗಳೂ ಕೂಡ ಫಿಕ್ಸ್ ಆಗಿವೆ. ನಾವು 1999ರ ಅಕ್ಟೋಬರ್ ತಿಂಗಳಿನಿಂದ ಅದನ್ನು ಮುಂದಕ್ಕೆ ನಡೆಸಿಕೊಂಡು ಬರುತ್ತಿದ್ದೇವೆ. ನಾವು ಏಜೆನ್ಸಿಗಳ ಮೂಲಕವಾಗಿ ಕೆಲಸ ಮಾಡುತ್ತಿದ್ದೇವೆ. ಏಜೆನ್ಸಿಗಳ ಮೂಲಕ ಕೆಲಸ ಮಾಡತಕ್ಕಂಥ ಕಾಲದಲ್ಲಿ ಒಳ್ಳೆಯದ್ದೂ ನಡೆಯುತ್ತದೆ ಮತ್ತು ಕೆಟ್ಟದ್ದೂ ಕೂಡ ನಡೆಯುತ್ತದೆ. ಆದ್ದರಿಂದ ಎಲ್ಲಿ ಕೆಟ್ಟದ್ದು ನಡೆದಿದೆ, ಎಲ್ಲಿ ಕೊರತೆ ತುಂಬಿದೆ, ಎಲ್ಲಿ ಕಳಪೆ ಕಾಮಗಾರಿ ನಡೆದಿದೆ ಎನ್ನತಕ್ಕಂಥದ್ದನ್ನು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಸೂಕ್ತವಾದಂತಹ ವಿಚಾರಣೆಯನ್ನು ನಡೆಸುತ್ತೇನೆ. ಮಾನ್ಯ ಸುರೇಶ್ ಕುಮಾರ್‌ರವರು ಡ್ರೈನೇಜ್ ಸಿಸ್ಟಮ್ ಸರಿಯಿಲ್ಲ, ಆದ್ದರಿಂದ ರಸ್ತೆಗಳು ಹಾಳಾಗುತ್ತಿವೆ ಎಂಬ ಮಾತನ್ನು ಹೇಳಿದರು. 1998ನೇ ಇಸವಿಯಲ್ಲೇ ಇದನ್ನು ಸರಿ ಪಡಿಸಬೇಕಾಗಿತ್ತು. ಅವತ್ತೇ ಈ ಡ್ರೈನೇಜ್ ಸಿಸ್ಟಮ್ ಕಡೆಗೆ ಹೆಚ್ಚು ಒತ್ತು ಕೊಟ್ಟಿದ್ದರೆ ಬಹುಶಃ ಇವತ್ತು ರಸ್ತೆಗಳು ಇಷ್ಟೊಂದು ಹಾಳಾಗಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಬಹುಶಃ ಹಲವಾರು ಕಾರಣಗಳಿಂದಾಗಿ ಅದರ ಬಗ್ಗೆ ಹೆಚ್ಚು ಗಮನ ಕೊಡಲಿಕ್ಕೆ ಸಾಧ್ಯವಾಗಿಲ್ಲದೇ ಇರಬಹುದು. ಆದರೆ ಮುಂದೆ ಅದನ್ನು ಸರಿಪಡಿಸಿಕೊಳ್ಳೋಣ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಏಜೆನ್ಸಿ ಹಿಂದೆಯೇ ಫಿಕ್ಸ್ ಆಗಿತ್ತು ಎನ್ನತಕ್ಕಂಥ ಮಾತನ್ನು ಹೇಳಿದರು. ಏಜೆನ್ಸಿ ಹಿಂದೆಯೇ ಫಿಕ್ಸ್ ಆಗಿದ್ದರೂ ಕೂಡ ಅಗ್ರಿಮೆಂಟ್ ಪ್ರಕಾರ ಇಂಥಿಂಥ ಕೆಲಸಗಳು ಈ ರೀತಿ ಮಾಡಬೇಕು ಎಂದು ನೋಡಿಕೊಳ್ಳುವುದು ನಿಮ್ಮ ಜವಾಬ್ದಾರಿಯಲ್ಲವೇ? ಕರಾರಿನಲ್ಲಿ ಆಗಿರುವ ಪ್ರಕಾರ ತಾವು ದಯವಿಟ್ಟು ಕ್ರಮವನ್ನು ತೆಗೆದುಕೊಳ್ಳಿ. ಅದನ್ನು ಬಿಟ್ಟು ಲೆಗೆಸಿಯಾಗಿ ಹಿಂದೆ ಆಗಿದ್ದನ್ನು ತೆಗೆದುಕೊಂಡಿದ್ದೇವೆ ಎಂದು ಹೇಳತಕ್ಕದ್ದು ಸರಿಯಲ್ಲ. ಹಿಂದೆ ತಪ್ಪು ಆಗಿದ್ದರೆ ತಾವು ಅದನ್ನು ಹಾಗೆಯೇ ಮುಂದುವರೆಸಿಕೊಂಡು ಹೋಗುತ್ತೀರಾ? ಹಿಂದೆ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಆಗ್ರಹಪಡಿಸುತ್ತೇನೆ. ನನಗೆ ಬಂದಿರುವ ಮಾಹಿತಿ ಪ್ರಕಾರ ರಸ್ತೆಗಳು ಹಾಳಾಗಲು ಅಲ್ಲಿ ಒಳ್ಳೆಯ ಕ್ವಾಲಿಟಿಯ ಆಸ್ಫಾಲ್ಟಿಂಗ್ ಮಾಡದಿರುವುದೇ ಕಾರಣವಾಗಿದೆ. ಒಳ್ಳೆಯ ಕ್ವಾಲಿಟಿ ಆಸ್ಫಾಲ್ಟಿಂಗ್ ಮಾಡಿದರೆ ಈ ರೀತಿಯಾಗುವುದಿಲ್ಲ ಎಂದು ಕೆಲವು ತಜ್ಞರು ನನಗೆ ತಿಳಿಸಿದ್ದಾರೆ. ಈ ದೃಷ್ಟಿಕೋನದಿಂದ ತಾವು ಇದನ್ನು ಪರಿಶೀಲನೆ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಆಸ್ಫಾಲ್ಟಿಂಗ್ ಬಗ್ಗೆ ನಾವು ರೀ-ಚೆಕ್ ಮಾಡುತ್ತೇವೆ. ಅವರು ಬಳಸುತ್ತಿರತಕ್ಕಂಥ ಆಸ್ಫಾಲ್ಟ್ ಅನ್ನು ಎಲ್ಲಿಂದ ಪ್ರಕ್ಯೂರ್ ಮಾಡುತ್ತಿದ್ದಾರೆ? ಅದಕ್ಕೆ ಸರ್ಟಿಫಿಕೇಷನ್ ಇದೆಯೇ? ಇವುಗಳ ಬಗ್ಗೆ ನಾನು ಸಂಬಂಧಪಟ್ಟವರಿಂದ ಸಮಜಾಯಿಸಿ ತೆಗೆದುಕೊಂಡು ತಮಗೆ ತಿಳಿಸುತ್ತೇನೆ. ನಾನು ಹಿಂದಿನ ಸರ್ಕಾರವನ್ನು ಆಕ್ಷೇಪಣೆ ಮಾಡುತ್ತಿದ್ದೇನೆ ಎಂಬ ಭಾವನೆ ತಮಗೆ ಬಂದಿದ್ದರೆ ಅದು ತಪ್ಪು ಗ್ರಹಿಕೆಯಾಗಿದೆ ಎಂದು ನಾನು ಹೇಳಬಯಸುತ್ತೇನೆ. ಇದು 1998ರಲ್ಲಿ ಪ್ರಾರಂಭವಾಯಿತು ಎಂದು ನಾನು ಹೇಳಿದ್ದೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದಕ್ಕೆ ನನ್ನ ಸಹಮತ ಇದೆ. ಇದು 1998ರಿಂದ ಪ್ರಾರಂಭವಾಗಿದೆ. ಆಗಿನಿಂದಲೂ ಕೂಡ ಅವ್ಯವಹಾರ ನಡೆದಿದೆ. 1998ರಿಂದ ಟೆಂಡರ್ ಕೊಡುವುದರಲ್ಲಿ ಇರಬಹುದು ಅಥವಾ ಕಳಪೆ ಕಾಮಗಾರಿ ನಡೆದಿರುವುದು ಇರಬಹುದು ಅಥವಾ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದು ಇರಬಹುದು, ಇವೆಲ್ಲವುಗಳ ಬಗ್ಗೆ ಒಂದು ಸಿ.ಓ.ಡಿ. ತನಿಖೆ ಮಾಡಬೇಕೆಂದು ಕೋರುತ್ತೇನೆ. 50 ಲಕ್ಷ ರೂಪಾಯಿಗಳ ಕ್ರಿಕೆಟ್ ಬೆಟ್ಟಿಂಗ್ ವಿಷಯದಲ್ಲಿ ಸಿ.ಬಿ.ಐ. ತನಿಖೆ ಮಾಡಲಾಗಿದೆ. ಆದರೆ ಇಲ್ಲಿ 120 ಕೋಟಿ ರೂಪಾಯಿಗಳಲ್ಲಿ 40 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ. ಆದ್ದರಿಂದ ಇದರ ಬಗ್ಗೆ ಸಮಗ್ರ ತನಿಖೆ ಮಾಡಿ ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆ ಹಚ್ಚಲು ಇದನ್ನು ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕು ಎಂದು ಕೋರುತ್ತೇನೆ. ಅಟ್ಲಾಂಟ ಎನ್ನುವ ಕಂಪನಿಗೆ ಕೊಡಬಾರದು ಎಂದು ಸರ್ವಸದಸ್ಯ ಸಭೆಯಾದ ಕೌನ್ಸಿಲ್‌ನಲ್ಲಿ ತೀರ್ಮಾನವಾಗಿದೆ. ಆದರೆ ಅದು ಹೇಳಿದ ಮೂರನೇ ದಿನ ಅವರಿಗೆ ಟೆಂಡರ್ ಕೊಟ್ಟಿದ್ದಾರೆ. ಮತ್ತೆ ಟೆಂಡರ್ ಕ್ಯಾನ್ಸಲ್ ಮಾಡಿದ್ದಾರೆ. ಆರು ಟೆಂಡರ್ ಅವನ ಹತ್ತಿರ ಇವೆ, ಮೂರು ಮಾತ್ರ ಕ್ಯಾನ್ಸಲ್ ಆಗಿವೆ. ದಯವಿಟ್ಟು ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು.

ಶ್ರೀ ಎಸ್.ಎಂ. ಕೃಷ್ಣ : 40 ಕೋಟಿ ರೂಪಾಯಿಗಳು ಮಿಸ್‌ಯೂಸ್ ಆಗಿದೆ ಎಂದು ಏನು ಹೇಳುತ್ತಿದ್ದಾರೆ, ಇದರಲ್ಲಿ ಯಾವುದೇ ಸತ್ಯವಿಲ್ಲ. ಇದನ್ನು ನಾನು ಪ್ರಬಲವಾಗಿ ನಿರಾಕರಿಸುತ್ತೇನೆ.

ಶ್ರೀ ಆರ್. ಅಶೋಕ್ : ಈ ಉತ್ತರದಿಂದ ನನಗೆ ತೃಪ್ತಿ ಇಲ್ಲ. ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರು ಸದನದಿಂದ ಹೊರ ನಡೆದರು)

ಶ್ರೀ ವಿ. ಸೋಮಣ್ಣ : ಮಾನ್ಯ ಸಭಾಧ್ಯಕ್ಷರೆ, ಯಾವ ಬಾಂಡ್ ರಸ್ತೆ ಕಾಮಗಾರಿಗಳನ್ನು ಪ್ರಾರಂಭ ಮಾಡಿದಿವಿ, ಅದು ಏನಾಗಿದೆ ಎನ್ನುವುದನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ. ಮಾನ್ಯ ಗೌರವಾನ್ವಿತ ಸದಸ್ಯರು 1997ರಲ್ಲಿ ಪ್ರಾರಂಭವಾದ ಕಾಮಗಾರಿಗಳು 125 ಕೋಟಿ ರೂಪಾಯಿಗಳಲ್ಲಿ 40 ಕೋಟಿ ರೂಪಾಯಿಗಳು ಅವ್ಯವಹಾರ ನಡೆದಿದೆ ಎಂದು ಹೇಳುವಾಗ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇದುವರೆಗೆ 65 ರಿಂದ 70 ಪರ್ಸೆಂಟ್ ಬಿಲ್ ಕೊಟ್ಟಿಲ್ಲ, 26,000 ಗುಂಡಿಗಳು ಎಂದು ಏನು ಹೇಳುತ್ತಿದ್ದಾರೆ, ಅದು ಕೇವಲ ಬಾಂಡ್ ರಸ್ತೆಗಳಲ್ಲಿ ಆದುದು ಅಲ್ಲ. ಇಡೀ ಬೆಂಗಳೂರು ನಗರದಲ್ಲಿ ನಾಲ್ಕೂವರೆ ಸಾವಿರ, ಐದು ಸಾವಿರ ಕಿ.ಮೀ. ದೂರದಲ್ಲಿ ಇರುವ ರಸ್ತೆಗಳಲ್ಲಿ ಆಗಿರಬಹುದು. ಇದಕ್ಕೆ ಬೆಲೆ ನಿಗದಿ ಮಾಡಿ ಚರ್ಚೆಯಾಗಲಿ, ಯಾರೇ ತಪ್ಪಿತಸ್ತ ಅಧಿಕಾರಿಗಳಿದ್ದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡೋಣ. ಕನ್‌ಸಲ್ಟೆನ್ಸಿ ಎಂದು ಮಾಡಿದ ಉದ್ದೇಶ ಗುಣಮಟ್ಟವನ್ನು ಕಾಪಾಡಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಡಾ. ಜೆಸ್ಸೋ ಹೇಳಿದ್ದಾರೆಂದು ಹೇಳುತ್ತಾರೆ, he is one of the consultants. ನಾನು ಅವರ ಸಲಹೆಯನ್ನು ತೆಗೆದುಕೊಂಡು ಮೀಟಿಂಗ್ ಮಾಡಿ ಆಗಿದೆ. ಬೆಂಗಳೂರಿನಲ್ಲಿ ಇಂತಹ ದೊಡ್ಡ ಮಳೆ ಬಿದ್ದಾಗ ಕೂಡ ಕೆಲವು ರಸ್ತೆಗಳು ಉತ್ತಮವಾಗಿವೆ.

(ಗೊಂದಲ)

ಆದರೆ, ಆಪಾದನೆಗಳನ್ನು ಮಾಡುವಾಗ ಸತ್ಯಾಸತ್ಯತೆ ಯೋಚನೆ ಮಾಡಬೇಕಾಗುತ್ತದೆ. ಗುಣಮಟ್ಟ ಸರಿ ಇಲ್ಲ, ಕೆಲಸ ಸರಿ ಇಲ್ಲ ಎಂದರೆ ಎನ್‌ಕ್ವೈರಿ ಮಾಡಲಿ. ಮಾಗಡಿ ರಸ್ತೆಗೆ ಹೋಗೋಣ, ಕಾಡು ರಸ್ತೆಗೆ ಹೋಗೋಣ ಎಲ್ಲೆಲ್ಲಿ ಎಂಎಲ್‌ಎಗಳು ಕಾರ್ಪೊರೇಟರ್‌ಗಳು ಇದ್ದಾರೆ ನಮ್ಮ ಜವಾಬ್ದಾರಿ ಕೂಡ ಇದೆ. ಕೆಲಸಕಾರ್ಯಗಳು ಮಾಡುವಾಗ ನಾವು ನೋಡುವ ಅವಶ್ಯಕತೆ ಇದೆ. ಎರಡೂವರೆ ಕಿ.ಮೀ. ಮಾಗಡಿ ರಸ್ತೆ ನೋಡಿ ಎಷ್ಟು ಚೆನ್ನಾಗಿದೆ. ಬೆಂಗಳೂರು ನಗರದಲ್ಲಿ ಆಗತಕ್ಕಂತಹ ಕೆಲಸ ಕಾರ್ಯಗಳಿಗೆ ಮುಖ್ಯಮಂತ್ರಿಗಳು ಉತ್ತೇಜನ ಕೊಡುತ್ತಿದ್ದಾರೆ. ಅದಕ್ಕೆ ನಾವು ಸಹಕಾರ ಕೊಡಬೇಕು.

(ಗೊಂದಲ)

ಅಧ್ಯಕ್ಷರು : ನೀವು ಬೇರೆ ನೋಟೀಸ್ ಕೊಡಿ ಅರ್ಧ ಗಂಟೆ ಚರ್ಚೆಗೆ ಹಾಕೋಣ. ಸುಬ್ಬಾರೆಡ್ಡಿಯವರೆ ತಾವು ಬುದ್ಧಿವಂತರು ದಯವಿಟ್ಟು ಕುಳಿತುಕೊಳ್ಳಿ. I will allow you on some other time. I have called the next question.

ಮಾಚೇನಹಳ್ಳಿಯ ಕೈಗಾರಿಕಾ ವಸಾಹತು

511 - ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿಯಲ್ಲಿರುವ ಕೈಗಾರಿಕೆಗಳೆಷ್ಟು? ಇವುಗಳಿಗೆ ನೀರು ಪೂರೈಸಲು ಆಗುತ್ತಿರುವ ವ್ಯಯವೆಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಶಿವಮೊಗ್ಗ ತಾಲ್ಲೂಕು ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು 89 ಕೈಗಾರಿಕಾ ಉದ್ದಿಮೆಗಳಿವೆ. ಸದರಿ ಕೈಗಾರಿಕಾ ಉದ್ದಿಮೆಗಳಿಗೆ ನೀರು ಪೂರೈಕೆಗಾಗಿ ತಿಂಗಳಿಗೆ ಸರಾಸರಿ ರೂ. 7,500.00 ಗಳು ವ್ಯಯವಾಗುತ್ತಿದೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು 89 ಕೈಗಾರಿಕೋದ್ದಿಮೆಗಳು ಕೆಲಸ ಮಾಡುತ್ತಿವೆ ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಕೇವಲ 44 ಉದ್ದಿಮೆಗಳು ಕೆಲಸ ಮಾಡುತ್ತಿವೆ. ಅದಕ್ಕೆ ಕಾರಣ ಅಲ್ಲಿ ನೀರಿನ ಅಭಾವವಿದೆ. ಮಾಚೇನಹಳ್ಳಿ ಶಿವಮೊಗ್ಗ ಮತ್ತು ಭದ್ರಾವತಿ ಮಧ್ಯದಲ್ಲಿರತಕ್ಕಂತಹ ಜಾಗ. ಭದ್ರಾ ನದಿಯಿಂದ ನೀರಿನ ಅನುಕೂಲತೆ ಕೊಟ್ಟರೆ ಮಾತ್ರ ಆ ಭಾಗ ಉತ್ತಮವಾಗಿ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಮಲೆನಾಡು ಪ್ರದೇಶಗಳಿಗೆ ಈ ಶೋಭೆ ತಂದ ಹಾಗಾಗುತ್ತದೆ. ಮತ್ತು ಆ ಭಾಗ ಬೆಳವಣಿಗೆಯಾಗುತ್ತದೆ. ಮಲೆನಾಡು ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.